“ನೀವು ಆಫೀಸಿಗೆ ಬರುವ ದಾರಿಯಲ್ಲಿದ್ದರೆ ಮನೆಗೆ ಮರಳಿ. ಮನೆಯಲ್ಲಿಯೇ ಇದ್ದರೆ ಅಲ್ಲಿಯೇ ಉಳಿಯಿರಿ. ಒಂದು ವೇಳೆ ಆಫೀಸಿನಲ್ಲಿದ್ದರೆ, ಕೂಡಲೇ ಲಾಗ್‌ಔಟ್ ಆಗಿ ಮನೆಗೆ ಹೊರಡಿ.”

ಇಂಥದ್ದೊಂದು ಇ–ಮೇಲ್ 'ಟ್ವಿಟರ್'ನ ಅರ್ಧದಷ್ಟು, ಅಂದರೆ 3,700 ಉದ್ಯೋಗಿಗಳಿಗೆ ಇತ್ತೀಚೆಗೆ ರವಾನೆಯಾಯಿತು. 'ಟ್ವಿಟರ್' ಖರೀದಿಸಿದ ಮಾರನೇ ದಿನವೇ ಎಲಾನ್ ಮಸ್ಕ್ ಇಂಥದ್ದೊಂದು ಶಾಕ್ ಅನ್ನು ಉದ್ಯೋಗಿಗಳಿಗೆ ನೀಡಿದ್ದರು. ಆರಂಭದಲ್ಲಿ 'ಟ್ವಿಟರ್'ನ ಸಿಇಒ ಸೇರಿದಂತೆ ಉನ್ನತಾಧಿಕಾರಿಗಳ ತಲೆದಂಡವಾಯಿತು. ಟ್ವಿಟರ್ ಖರೀದಿಸಿದ ಮೇಲೆ, ಅಲ್ಲಿದ್ದ ಅರ್ಧದಷ್ಟು ಸಿಬ್ಬಂದಿ ಮಸ್ಕ್ ಕಣ್ಣಿಗೆ ಹೊರೆಯಾಗಿ ಕಾಣಿಸಿದ್ದರು. ಹೀಗಾಗಿಯೇ ಮಸ್ಕ್ ಉದ್ಯೋಗಿಗಳ ಸಾಮೂಹಿಕ ವಜಾಕ್ಕೆ ಮುಂದಾದರು. ಅದರ ಪರಿಣಾಮವಾಗಿ, ಭಾರತದ ರಾಜಧಾನಿ ದೆಹಲಿ ಸೇರಿದಂತೆ ವಿಶ್ವದ ನಾನಾ ಕಡೆಯಿದ್ದ ಟ್ವಿಟರ್ ಕಚೇರಿಗಳು ಬಂದ್ ಆದವು. ಆಫೀಸಿಗೆ ಬಂದವರು ಸಪ್ಪೆ ಮೋರೆ ಹಾಕಿಕೊಂಡು ಮನೆಗೆ ಮರಳಿದರು. ಮನೆಯಲ್ಲಿದ್ದವರು ತಮ್ಮ ಲ್ಯಾಪ್‌ಟಾಪ್‌ನಿಂದ ಆಫೀಸಿಗೆ ಲಾಗ್ ಇನ್ ಆಗಲು ಹೋದರೆ, ಅದು ಕನೆಕ್ಟ್ ಆಗಲಿಲ್ಲ. ಅದರರ್ಥ, ಅವರ ಕೆಲಸ ಹೋಗಿತ್ತು. ಉದ್ಯೋಗ ಕಳೆದುಕೊಂಡಿದ್ದ ಒಂಬತ್ತು ತಿಂಗಳ ಗರ್ಭಿಣಿಯೊಬ್ಬಳು ಟ್ವಿಟರ್‌ನಲ್ಲಿಯೇ ತನ್ನ ಫೋಟೊ ಹಾಕಿಕೊಂಡು ಗೋಳು ಹೇಳಿಕೊಂಡಳು. ಹೆರಿಗೆ ರಜೆ ಪಡೆದಿದ್ದ ಇನ್ನೊಬ್ಬ ಉದ್ಯೋಗಿಗೆ ಶಾಶ್ವತ ರಜವೇ ಸಿಕ್ಕಿತು. ಮಸ್ಕ್ ವಿರುದ್ಧ ಟ್ವಿಟರ್‌ನಲ್ಲಿ ಕಾಮೆಂಟ್ ಮಾಡಿದ ಉದ್ಯೋಗಿಗಳೂ ಕೆಲಸ ಕಳೆದುಕೊಂಡರು.

'ಮೆಟಾ' ಸಮೂಹದ ಕಥೆ ಕೇಳಿ. 'ಫೇಸ್‌ಬುಕ್' ಒಡೆತನದ ಮೆಟಾ ಗ್ರೂಪಿನ ಬಾಸ್ ಮಾರ್ಕ್ ಜುಕರ್ ಬರ್ಗ್, 'ಉದ್ಯೋಗ ಕಡಿತದ ಹೊಣೆಯನ್ನು ನಾನೇ ಹೊರುತ್ತೇನೆ. ಯಾರು ಉದ್ಯೋಗ ಕಳೆದುಕೊಂಡಿರುವಿರೋ ಎಲ್ಲರ ಬಳಿಯೂ ನಾನು ಕ್ಷಮೆ ಕೇಳುತ್ತೇನೆ. ನಾನು ನಿಮ್ಮನ್ನು ಕೆಲಸದಿಂದ ತೆಗೆದು ತಪ್ಪು ಮಾಡುತ್ತಿದ್ದೇನೆ ದಯವಿಟ್ಟು ಕ್ಷಮಿಸಿ' ಎನ್ನುತ್ತಲೇ, ತಮ್ಮ ಕಂಪನಿಯಲ್ಲಿನ ಉದ್ಯೋಗಿಗಳ ಪೈಕಿ ಶೇ. 13ರಷ್ಟು, ಅಂದರೆ 11,000 ನೌಕರರನ್ನು ನವೆಂಬರ್ ತಿಂಗಳ ಎರಡನೇ ವಾರದಲ್ಲಿ ವಜಾ ಮಾಡಿದರು. 'ಇತ್ತೀಚಿನ ದಿನಗಳಲ್ಲಿ ಕಂಪನಿಯಲ್ಲಿ ಏನಾಯಿತೋ ಅದೆಲ್ಲಕ್ಕೂ ಸಾರಿ' ಎಂದ ಕ್ರಿಪ್ಟೊಕರೆನ್ಸಿ ಟ್ರೇಡಿಂಗ್ ಸಂಸ್ಥೆ 'ಅಲ್ಮೆಡಾ'ದ ಸಂಸ್ಥಾಪಕ ಸ್ಯಾಮ್ ಬ್ಯಾಂಕ್‌ಮ್ಯಾನ್ ಫ್ರೈಡ್ ಸಹ ತಮ್ಮ ಉದ್ಯೋಗಿಗಳಿಗೆ ಮನೆಯ ದಾರಿ ತೋರಿಸಿದರು. ಇವರಂತೆಯೇ ದೈತ್ಯ ಕಂಪನಿಗಳ ಬಾಸ್‌ಗಳೆಲ್ಲರೂ ಒಂದು 'ಸಾರಿ'ಯನ್ನು ಬಳಸಿದರು, ಸಾವಿರಾರು ಉದ್ಯೋಗಿಗಳನ್ನು ನಿರುದ್ಯೋಗಿಗಳಾಗಿಸಿದರು.

ಲೇಆಫ್‌ಗಳ ಬಗ್ಗೆಯೇ ಡೇಟಾ





ಲೇ–ಆಫ್‌ಗಳ ಕುರಿತ ಮಾಹಿತಿಗೆ layoffs.fyi ಜಾಲತಾಣದ ಕನ್ನಡಿ